ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 4–08–2018**

# ಪತ್ರಿಕಾ ಆಮಂತ್ರಣ

1. **ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯ**

   **2017ರ ಸಾಲಿನ ವರ್ಷದ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿಗಳ ಪ್ರದಾನ ಸಮಾರಂಭ**

   **ಪ್ರಶಸ್ತಿ ಪ್ರದಾನ:**
   ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

   **ಮುಖ್ಯ ಅತಿಥಿಗಳು:**
   ಭಾರತ ರತ್ನ ಪ್ರೊ. ಸಿ.ಎನ್. ಆರ್. ರಾವ್,
   ಲಿನಸ್ ಪೌಲಿಂಗ್ ರಿಸರ್ಚ್ ಸಂಶೋಧನಾ ಪ್ರಾಧ್ಯಾಪಕರು ಮತ್ತು ಗೌರವ ಅಧ್ಯಕ್ಷರು, ಜೆಎನ್‌ಸಿಎಎಸ್‌ಆರ್ ಅಧ್ಯಕ್ಷರು, ವಿಜ್ಞಾನ ಮತ್ತು ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ

   ಅಧ್ಯಕ್ಷತೆ:
   ಕೆ.ಜೆ. ಜಾರ್ಜ್,
   ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು ಮತ್ತು ಕೆ.ಎಸ್.ಸಿ.ಎಸ್.ಟಿ.ಯ ಉಪಾಧ್ಯಕ್ಷರು.

   ದಿನಾಂಕ: 06–09–2018, ಸೋಮವಾರ, ಸಮಯ: ಸಂಜೆ 4–00 ಗಂಟೆಗೆ
   ಸ್ಥಳ: ಜೆ.ಎನ್.ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂ–12

2. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಪುಸ್ತಕ ಅನಾವರಣ ಸಮಾರಂಭ:

**ಮುಖ್ಯ ಅತಿಥಿ:**
ಡಾ. ನಾಗವಲ್ಲಿ ನಾಗರಾಜ್, ಲೇಖಕರು.

**ಅಧ್ಯಕ್ಷತೆ:**
ಫಯಾಜ್ ಖಾನ್, ಸಂಗೀತ ನೃತ ಅಕಾಡೆಮಿಯ ಅಧ್ಯಕ್ಷರು.

ದಿನಾಂಕ: 06-08-2018, ಸೋಮವಾರ, ಸಮಯ : ಸಂಜೆ 6.00 ಗಂಟೆಗೆ
ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಂಗಳೂರು

## ಪತ್ರಿಕಾ ಪ್ರಕಟಣೆ

**ಸಂಖ್ಯೆ: 778/888**

# ಶೋಷಣೆಗೆ ಒಳಗಾದ ಮಕ್ಕಳ ಘಟನೆಗಳ ತನಿಖೆಯಲ್ಲಿ ಪೊಲೀಸರ ಜವಾಬ್ದಾರಿ ದೊಡ್ಡದು – ನೀಲಮಣಿ ಎನ್. ರಾಜು

ಬೆಂಗಳೂರು, ಆಗಸ್ಟ್ 4, (ಕರ್ನಾಟಕ ವಾರ್ತೆ)

ಮಕ್ಕಳ ವಿರುದ್ಧ ನಡೆಯುವ ಲೈಂಗಿಕ ಶೋಷಣೆಯು ಅತ್ಯಂತ ಗಂಭೀರವಾದ ಅಪರಾಧವಾಗಿದ್ದು ಇಂತಹ ಪ್ರಕರಣಗಳ ತನಿಖೆಯಲ್ಲಿ ಶೋಷಣೆಗೆ ಒಳಗಾದ ಮಕ್ಕಳ ಸಾಮಾಜಿಕ ಘನತೆ ಹಾಗೂ ಕ್ಷೇಮವನ್ನು ಕಾಪಾಡುವ ಜವಾಬ್ದಾರಿಯನ್ನು ಪೊಲೀಸರು ಮೆರೆಯಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರಾದ ನೀಲಮಣಿ ಎನ್. ರಾಜು ಅವರು ಪೊಲೀಸರಿಗೆ ಕರೆ ನೀಡಿದರು.

ಇಂದು ನಗರದ ಪೊಲೀಸ್ ಮಹಾನಿರೀಕ್ಷಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ "ಪೋಕ್ಸೊ ಕಾಯ್ದೆ – 2012 ರ ಸಮರ್ಪಕ ಅನುಷ್ಠಾನ " ಕುರಿತಂತೆ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳ ವಿರುದ್ಧ ನಡೆಯುವ ಲೈಂಗಿಕ ಶೋಷಣೆಯ ಘಟನೆಗಳ ಕಾಲಮಿತಿಯಲ್ಲಿ ನ್ಯಾಯಯುತವಾಗಿ ಅತ್ಯಂತ ತುರ್ತಾಗಿ ಕ್ರಮಕೈಗೊಳ್ಳಬೇಕು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ತನಿಖೆ ನಡೆಯುವ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಮಾಜಿಕ ಸಮಸ್ಯೆಗಳ ಅರಿವು ತನಿಖಾಧಿಕಾರಿಗಳಿಗೆ ಇರಬೇಕು. ಇಂತಹ ಪ್ರಕರಣಗಳ ತನಿಖೆ ಪೂರ್ಣಗೊಳ್ಳುವ ತನಕ ಹಾಗೂ ಪೂರ್ಣಗೊಂಡ ನಂತರ ಸಹ ಶೋಷಣೆಗೆ ಒಳಪಟ್ಟ ಮಕ್ಕಳ ಬಗ್ಗೆ ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಯದಂತೆ ಗೌಪ್ಯತೆಯನ್ನು ಕಾಪಾಡಿಕೊಂಡು ಮಕ್ಕಳ ಘನತೆಯನ್ನು ಕಾಪಾಡುವುದು ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ.

ಇಂತಹ ಘಟನೆಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಚರ್ಚಿಸಿದ್ದಲ್ಲಿ ಉತ್ತಮ ರೀತಿಯ ತನಿಖೆಗೆ ಸಹಕಾರಿಯಾಗಲಿದೆ. ಗುಣಮಟ್ಟದ ತನಿಖೆಯನ್ನು ನಡೆಸಲು ಇಂತಹ ಕಾರ್ಯಾಗಾರಗಳು ಸಹಕಾರಿಯಾಗಲಿದೆ.

ಈ ಕಾರ್ಯಾಗಾರವನ್ನು ಸದುಪಯೋಗಪಡಿಸಿಕೊಂಡು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಇಲ್ಲಿ ಪಾಲ್ಗೊಂಡಿರುವ ಹಿರಿಯ ಅಧಿಕಾರಿಗಳು ತಮ್ಮ ಕಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿದಾಗ ಕಾರ್ಯಾಗಾರದ ಉದ್ದೇಶ ಈಡೇರಿದಂತಾಗುತ್ತದೆ ಎಂದು ಹೇಳಿದರು.

ಇದೇ ಸಮಯದಲ್ಲಿ ಪೊಲೀಸ್ ಇಲಾಖೆ ಹೊರತಂದಿರುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ನಿರ್ವಹಣೆಗೆ ನಿರ್ಧಿಷ್ಟ ಕಾರ್ಯವಿಧಾನ ಕಿರುಹೊತ್ತಿಗೆಯನ್ನು ಅವರು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿದಿಗಳು, ವಕೀಲರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಸಂಖ್ಯೆ: 779/889**

## ತಂಬಾಕು ನಿಯಂತ್ರಣ ಕಾನೂನು 2003 ಜಾಗೃತಿ ಸಭೆ

ಬೆಂಗಳೂರು, ಆಗಸ್ಟ್ 4, (ಕರ್ನಾಟಕ ವಾರ್ತೆ)

ತಂಬಾಕು ನಿಯಂತ್ರಣ ಕಾನೂನು (COPTA) – 2003 ಕಾಯ್ದೆ ಜಾರಿಗೆ ಪೊಲೀಸ್ ಅಧಿಕಾರಿಗಳ ಪಾತ್ರ ಮಹತ್ತರವಾದದ್ದು. ಇವರು ತಂಬಾಕು ಉತ್ಪನ್ನಗಳ, ಸರಬರಾಜು, ನಿಯಂತ್ರಣದ ಬಗ್ಗೆ ನಿಗಾವಹಿಸಿ, ನಿಯಮ ಉಲ್ಲಂಘನೆ ಮಾಡಿದವರಿಗೆ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ವಿಜಯಶಂಕರ್ ಅವರು ತಿಳಿಸಿದರು

ಅವರು ಇಂದು ತಮ್ಮ ಕಚೇರಿಯಲ್ಲಿ ತಂಬಾಕು ನಿಯಂತ್ರಣ ಕಾನೂನು (COPTA) – 2003 ಜಾಗೃತಿ ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು

ಈ ಕಾಯ್ದೆಯ ಪ್ರಕಾರ ಸಾರ್ವಜನಿಕವಾಗಿ ಧೂಮಪಾನ ಮಾಡುವುದು ಅಪರಾಧವೆನಿಸುತ್ತದೆ. ಇವರಿಗೆ ನಿಯಮದಡಿ 200ರೂ ರವರೆಗೆ ದಂಡ ಸಹ ವಿಧಿಸಬಹುದು. ಅದರಂತೆ ತಂಬಾಕು ಉತ್ಪನ್ನಗಳ ನೇರ ಮತ್ತು ಪರೋಕ್ಷ ಜಾಹಿರಾತು, ಪ್ರಯೋಜನಕತೆ ನಿಷೇಧಿಸಲಾಗಿದೆ. ತಂಬಾಕು ಉತ್ಪನ್ನಗಳ ಬಗ್ಗೆ ಭಿತ್ತಪತ್ರ, ಜಾಹಿರಾತು ಪ್ರಕಟಣೆ, ಪ್ರಸಾರ ನಿಷೇಧಿಸಲಾಗಿದೆ. ಈ ನಿಯಮ ಉಲ್ಲಂಘಿಸಿದ ವ್ಯಕ್ತಿಗೆ ಮೊದಲ ಸಲ 2 ವರ್ಷದ ಜೈಲು ಶಿಕ್ಷೆ ಅಥವಾ ರೂ 1000 ದಂಡ ಅಥವಾ ಈ

ಎರಡೂ ವಿಧಿಸಬಹುದು. ಎರಡೇ ಸಲ ತಪ್ಪಿತಸ್ಥರಾದರೆ 5000 ರೂ. ದಂಡ ಮತ್ತು 5 ವರ್ಷ ಶಿಕ್ಷೆ ಪ್ರಮಾಣವನ್ನು ವಿಧಿಸಬಹುದು. ಅಪ್ರಾಪ್ತ ವಯಸ್ಸಿನ ಮಕ್ಕಳ ತಂಬಾಕು ಸೇವನೆ ತಡೆಯಲು, ಶಿಕ್ಷಣ ಸಂಸ್ಥೆಗಳ ಹತ್ತಿರ ಇದನ್ನು ಮಾರಾಟ ಮಾಡದಂತೆ ನಿಘಾ ವಹಿಸಬೇಕಿದೆ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾಡಳಿತ, ಜಿಲ್ಲಾ ಪಂಚಯತ್ ಸಹಯೋಗದೊಂದಿಗೆ ಆಗಸ್ಟ್ 10 ರಂದು ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನವನ್ನು ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ 1–19 ವಯಸ್ಸಿನ ಎಲ್ಲಾ ಮಕ್ಕಳಿಗೆ ಜಂತು ಹುಳು ನಾಶಕ ಮಾತ್ರೆಯನ್ನು ಎಲ್ಲಾ ಶಾಲೆಗಳು, ಅಂಗನವಾಡಿ ಕೇಂದ್ರಗಳಲ್ಲಿ ಆಗಸ್ಟ್ 10 ರಿಂದ ಉಚಿತವಾಗಿ ನೀಡಲಾಗುತ್ತದೆ. ಆ ದಿನದಂದು ಮಾತ್ರೆ ಪಡೆಯಲಾಗದ ಮಕ್ಕಳಿಗೆ ಆಗಸ್ಟ್ 17 ರಂದು ನೀಡಲಾಗುತ್ತದೆ. ಈ ಕುರಿತು ಎಲ್ಲಾ ಶಾಲೆಗಳಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಬಿಇಓಗಳಿಗೆ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ರೂಪ ಸೂಚಿಸಿದರು.

**ಸಂಖ್ಯೆ: 780/890**

# ಸಾರಿಗೆ ಅದಾಲತ್

ಬೆಂಗಳೂರು, ಆಗಸ್ಟ್ 4, (ಕರ್ನಾಟಕ ವಾರ್ತೆ)

ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಕಸ್ತೂರಿ ನಗರ, ಬೆಂಗಳೂರು (ಪೂರ್ವ) ಇಲ್ಲಿ ಆಗಸ್ಟ್ 6 ರ ಸೋಮವಾರದಂದು ಮಧ್ಯಾಹ್ನ 3.00 ಗಂಟೆಗೆ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಈ ಅದಾಲತ್‌ನಲ್ಲಿ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದು, ಈ ವ್ಯಾಪ್ತಿಗೆ ಬರುವ ಸಾರ್ವಜನಿಕರು ಅದಾಲತ್‌ನಲ್ಲಿ ಪಾಲ್ಗೊಳ್ಳಲು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 781/891**

# TRANSPORT ADALAT

Bengaluru, August 4 (Karnataka Information)

Public are hereby informed that the "TRANSPORT ADALAT" will be held on 6th August 2018 Monday at 3.00 pm in the premises of Deputy Commissioner for Transport and Senior Regional Transport Office,

Kasturinagar, Bengaluru-43 which will be attended by Senior Officers of Transport Department. The Public are requested to participate in the adalath.

**ಸಂಖ್ಯೆ: 782/892**

## ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ

### ಡಿಪ್ಲೋಮಾ ಸಿನಿಮಾಟೋಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ ಹಾಗೂ ಇಂಜಿನಿಯರಿಂಗ್

## ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 4, (ಕರ್ನಾಟಕ ವಾರ್ತೆ)

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ವತಿಯಿಂದ ಪ್ರಸಕ್ತ 2018-19 ನೇ ಸಾಲಿಗೆ ಡಿಪ್ಲೋಮಾ ಸಿನಿಮಾಟೋಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ ಹಾಗೂ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್ ಮೂಲಕ ಭರ್ತಿಮಾಡಿದ ನಂತರ ಬಾಕಿ ಉಳಿದ ಸೀಟುಗಳ ಪ್ರವೇಶಕ್ಕಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯ ಆಧಾರದ ಮೇಲೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಕವನ್ನು ತಾಂತ್ರಿಕಾ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್ www.dte.kar.nic.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ವಯ ಭರ್ತಿಮಾಡಿಕೊಂಡು ಅರ್ಜಿ ನೋಂದಣಿ ಶುಲ್ಕ ರೂ 100/- (GM/2A/2B/3A/3B) ಮತ್ತು ರೂ 50/- (SC/ST/CAT-1) ಗಳನ್ನು ನಗದಾಗಿ ಪಾವತಿಲು ಸೂಚಿಸಲಾಗಿದೆ.

ಎಲ್ಲಾ ಮೂಲ ದಾಖಲೆಗಳು , ಒಂದು ಸೆಟ್ ಜೆರಾಕ್ಸ್ ಪ್ರತಿ ಮತ್ತು ಇತ್ತೀಚಿನ 04 ಪಾಸ್‌ಪೋರ್ಟ್ ಅಳತೆಯ ಫೋಟೋಗಳೊಂದಿಗೆ ಪ್ರಾಂಶುಪಾಲರ ಕಚೇರಿ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು-88 ಇಲ್ಲಿಗೆ ಆಗಸ್ಟ್ 10 ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 080 28466768 ಮತ್ತು 28446672 ಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 783/893**

# ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 4, (ಕರ್ನಾಟಕ ವಾರ್ತೆ)

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು 2018–19 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯಗಳಿಗೆ ಎರಡು ವರ್ಷಗಳ ಅವಧಿಯ ಪಿ.ಬಿ.ಬಿ.ಎಸ್.ಎಸ್ಸಿ ನರ್ಸಿಂಗ್ (Post Basic - B.Sc Nursing Degree) ವ್ಯಾಸಂಗಕ್ಕೆ ಅರ್ಹ ಸೇವಾನಿರತ ಶುಶ್ರೂಷಕರುಗಳಿಂದ ಅರ್ಜಿ ಆಹ್ವಾನಿಸಿದೆ.

ಪಿ.ಬಿ.ಬಿ.ಎಸ್ಸಿ (ನ) ವ್ಯಾಸಂಗಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜನರಲ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ನೋಂದಾಯಿತ ದಾದಿಯಾಗಿರತಕ್ಕದ್ದು/ಆರೋಗ್ಯ ಸಂದರ್ಶಕಿಯಾಗಿರಬೇಕು. ಕನಿಷ್ಠ 5 ವರ್ಷಗಳ ಸೇವೆ ಪೂರ್ಣಗೊಳಿಸಿರಬೇಕು ಹಾಗೂ ಖಾಯಂ ಪೂರ್ವಾವಧಿ ಘೋಷಣೆಯಾಗಿರಬೇಕು.

ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತವಾದ ಕಲೆ, ವಾಣಿಜ್ಯ ಅಥವಾ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. 48 ವಯೋಮಾನ ಮೀರಿರಬಾರದು. ಉತ್ತಮ ಸೇವಾ ವೃತ್ತಿ ಹಾಗೂ ಸೇವಾ ದಾಖಲೆಗಳನ್ನು ಹೊಂದಿರಬೇಕು. ಈ ಹಿಂದೆ ಉನ್ನತ ವ್ಯಾಂಸಗಕ್ಕಾಗಿ ನಿಯೋಜಿಸಲ್ಪಟ್ಟಲ್ಲಿ ವ್ಯಾಸಂಗದ ಅವಧಿ ಮುಗಿದ ನಂತರ ನಿಯಮಾವಳಿ ಪ್ರಕಾರ ಬಾಂಡ್ ಅವಧಿಯನ್ನು ಪೂರೈಸಿರತಕ್ಕದ್ದು.

ವ್ಯಾಸಂಗದ ಅವಧಿಯಲ್ಲಿ ಶುಶ್ರೂಷಕರು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ದೀರ್ಘಾವಧಿ ರಜೆಯನ್ನು ಪಡೆಯುವುದಿಲ್ಲವೆಂದು ಸ್ವಯಂ ಘೋಷಣೆ ನೀಡತಕ್ಕದ್ದು. ಶಿಕ್ಷಣಾರ್ಥಿಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇಲ್ಲವೆಂದು ನೇಮಕಾತಿ ಪ್ರಾಧಿಕಾರದಿಂದ ದೃಢೀಕರಣ ಪತ್ರ ಸಲ್ಲಿಸುವುದು.

ಪಿ.ಬಿ.ಬಿ.ಎಸ್ಸಿ (ನ) ವ್ಯಾಸಂಗಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ಸೇವಾನಿರತ ಶುಶ್ರೂಷಕರು ನಿಗದಿತ ಅರ್ಜಿಯನ್ನು ಪ್ರಾಂಶುಪಾಲರ ಕಚೇರಿ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು, ಹಾಸನ, ಹೊಳೆನರಸೀಪುರ ಕಿದ್ವಾಯಿ ಸ್ಮಾರಕ ಗ್ರಂಥಿ, ಬೆಂಗಳೂರು ಮತ್ತು ಹುಬ್ಬಳ್ಳಿ ಇಲ್ಲಿ ಆಗಸ್ಟ್ 16 ರವರೆಗೆ ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆಯವರೆಗೆ ಕಚೇರಿ ವೇಳೆಯಲ್ಲಿ ರೂ 200/– ನಗದು ಪಾವತಿ ಮಾಡಿ ಪಡೆಯಬಹುದಾಗಿದೆ.

ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯ ಜೊತೆ ಪ್ರಮಾಣ ಪತ್ರಗಳ ಧೃಡೀಕರಣ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ನೇಮಕಾತಿ ಪ್ರಾಧಿಕಾರದ ಅನಾಕ್ಷೇಪಣಾ ಪತ್ರದೊಂದಿಗೆ (NOC ) ಸದಸ್ಯ ಕಾರ್ಯದರ್ಶಿಗಳು ಹಾಗೂ ಪ್ರಾಂಶುಪಾಲರು, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಕೋಟೆ,

ಬೆಂಗಳೂರು ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕವಾಗಲಿ (SPEED POST) ದಿನಾಂಕ: 20-08-2018 ಸಂಜೆ ನಾಲ್ಕು ಗಂಟೆಯೊಳಗಾಗಿ ಸಲ್ಲಿಸಬೇಕು.

ವಿಶ್ವ ಆರೋಗ್ಯ ಸಂಸ್ಥೆ, ನವದೆಹಲಿ ಇವರು ನಿಯೋಜಿಸುವ ವಿದೇಶಿ ಅರ್ಜಿದಾರರಿಗೆ 5 ಸ್ಥಾನಗಳು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ಶುಶ್ರೂಷ ತರಬೇತಿಯನ್ನು ಹೊಂದಿರುವ ಮಹಿಳಾ ಆರೋಗ್ಯ ಸಂದರ್ಶಕಿರಿಗೆ 5 ಸ್ಥಾನಗಳು ಇರುತ್ತವೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 784/894**

**NIMHANS sets up ties with Public Health England, hosts India-UK conference**

**Bengaluru, July 4(Karnataka Information)**

The National Institute of Mental Health and Neuro Sciences (NIMHANS) has exchanged a Memorandum of Understanding with Public Health England (PHE).The nation’s premier mental health institution, whose origins go back to 1847, aims to set up collaborative programmes with PHE in mental health and public health system models including ‘Public Health Observatories’ (PHOs). PHE has integrated all the PHOs in England into an integrated knowledge and intelligence network.

NIMHANS hosted the 2nd India-UK roundtable on establishing India’s first PHO on 2-3 August, attended by 50 experts from PHE, NIMHANS and key institutions across India such asAll India Institute of Medical Sciences in Delhi, Jawaharlal Institute of Postgraduate Medical Education and Research in Puducherry and National Institute of Epidemiology in Chennai.

Other leading Bengaluru-based institutions also participated in the roundtable including Bangalore Medical College and Research Institute, British Deputy High Commission, Indian Institute of Science, Institute of Public Health, International Institute of Information Technology, Kolar District Health Office, MS Ramaiah Medical College, and National Centre for Disease Informatics and Research.

NIMHANS Director Professor BN Gangadhar said: *“Mental health is a major issue common to both the UK and India. The WHO estimates that 56 million Indians suffer from depression and 38 million from anxiety disorders; it is shameful that we are losing a student an hour to suicide due to mental distress. In the UK, one in four adults and one in 10 children experience mental illness; but significant progress has been made towards ‘parity of esteem’ which values mental health equally with physical health.”*

*"The Ministry of Health & Family Welfare has notified the Mental Healthcare Act on 29 May 2018, and our country is at the crossroads of a major transformation that can benefit from strong PHO networks for physical as well as mental health. The planning for the 'Ayushman Bharat' programme presents another opportunity to create community-level interventions powered by Big Data and intelligence to help implement the Act"*, he added.

The Memorandum of Understanding was exchanged by Professor Gangadhar with PHE's Director of Health Intelligence Professor Peter Bradley. Also present were dignitaries including Professor S.S. Vasan of PHE and Professor G. Gururaj of NIMHANS who are the national focal points of this collaboration. Professor Gururaj was also facilitated in the event for winning the Dr.Raja Ramanna Award for contribution to public health.

**Additional information on PHOs:** According to the Association of PHOs, the job of a PHO is to give frontline health and social care organisations, as well as government policymakers, the information and evidence they need to make the best decisions about improving people's health and reducing health inequalities.

**Additional information on PHE:** Public Health England (PHE) is an operationally autonomous executive agency of the UK Department of Health and Social Care with the mission is to protect and improve the nation's health and to address inequalities. It has scientific and technical expertise in different disciplines of public health including communicable and non-communicable disease control, mental public health, health improvement, health marketing, epidemiology, disease surveillance and emergency response and management. www.gov.uk/phe

**Additional information on NIMHANS:** National Institute of Mental Health and Neuro Sciences (NIMHANS) is an Institution of National Importance under Ministry of Health and Family Welfare, vide Government of India Gazette Notification dated 14.9.2012. It was created in 1974 through amalgamation of sender bodies whose origins can be traced back to 1847. Its vision is to be a world leader in the area of mental health and neurosciences and to evolve state-of-the-art approaches to patient care through translational research.www.nimhans.ac.in

**Contact for more information:**

**Public Health England (Professor S.S. Vasan) 9843008263** vasan@phe.gov.uk

**NIMHANS (Professor G. Gururaj) 9448474451** epiguru@yahoo.com

**ಸಂಖ್ಯೆ: 785/895**

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಆಗಸ್ಟ್ 4 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು,

ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 05-08-2018** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.
2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಶುಭಾ ಪ್ರಹಲ್ಲಾದರಾವ್ ರವರಿಂದ ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಸಂಖ್ಯೆ: 786/896**

## ಪ್ಯಾಟ್ಸನ್ ರೋಡ್ರಿಗ್ಸ್ ಹತ್ಯೆಗೆ ಸಚಿವ ದೇಶಪಾಂಡೆ ಆಘಾತ

ಬೆಂಗಳೂರು, ಆಗಸ್ಟ 04, 2018-

ಅಫಘಾನಿಸ್ತಾನದಲ್ಲಿ ಅಪರಿಚಿತ ದುಷ್ಕರ್ಮಿಗಳಿಂದ ಅಪಹರಣಕ್ಕೊಳಗಾಗಿದ್ದ ಕಾಗವಾಡದ ಪ್ಯಾಟ್ಸನ್ ರೋಡ್ರಿಗ್ಸ್ ಅವರನ್ನು ಹತ್ಯೆ ಮಾಡಿರುವ ಘಟನೆಗೆ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್ ವಿ ದೇಶಪಾಂಡೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

ಘಟನೆಯ ಬಗ್ಗೆ ಸಂತಾಪ ಸೂಚಿಸಿರುವ ಅವರು, ``ಉದ್ಯೋಗವನ್ನು ಅರಸಿಕೊಂಡು ಹೋಗಿದ್ದ ಅಮಾಯಕ ವ್ಯಕ್ತಿಗಳನ್ನು ಬರ್ಬರವಾಗಿ ಕಗ್ಗೊಲೆಗೈದಿರುವ ಘಟನೆಯು ಹೇಡಿಗಳ ಕೃತ್ಯವಾಗಿದೆ. ಮನುಕುಲಕ್ಕೇ ಕಳಂಕ ತರುವಂತಹ ಇಂತಹ ಘಟನೆಗಳು ತೀವ್ರ ಖಂಡನಾರ್ಹ" ಎಂದಿದ್ದಾರೆ.

``ಪ್ಯಾಟ್ಸನ್ ಅವರ ಈ ದುರಂತ ಅಂತ್ಯಕ್ಕೆ ಕಾರಣರಾದವರನ್ನು ಅಫಘಾನಿಸ್ತಾನ ಸರಕಾರವು ಕೂಡಲೇ ಪತ್ತೆ ಹಚ್ಚಿ, ಶಿಕ್ಷಿಸಬೇಕು. ಕೇಂದ್ರ ಸರಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕೂಡ ಇಂತಹ ಘಟನೆಗಳು ಮರುಕಳಿಸದಂತೆ ಆ ದೇಶದ ಸರಕಾರದೊಂದಿಗೆ ಮಾತುಕತೆ ನಡೆಸಿ,

ಆಗ್ರಹ ಪಡಿಸಬೇಕು" ಎಂದು ದೇಶಪಾಂಡೆ ಹೇಳಿದ್ದಾರೆ.

``ಪ್ಯಾಟ್ಸನ್ ಅವರ ಈ ಸಾವಿನಿಂದ ಉಂಟಾಗಿರುವ ದುಃಖವನ್ನು ಭರಿಸಿಕೊಳ್ಳುವ ಶಕ್ತಿಯನ್ನು ಭಗವಂತನು ಕುಟುಂಬ ವರ್ಗದವರಿಗೆ ದಯಪಾಲಿಸಲಿ ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಇಡೀ ಸಮಾಜ ಪ್ಯಾಟ್ಸನ್ ಅವರ ಕುಟುಂಬದ ಬೆಂಬಲಕ್ಕೆ ನಿಲ್ಲಬೇಕು," ಎಂದು ಸಚಿವರು ಪ್ರಾರ್ಥಿಸಿದ್ದಾರೆ.

**ಸಂಖ್ಯೆ: 787/897**

## ಫಲಿತಾಂಶ ಪ್ರಕಟ

**ಬೆಂಗಳೂರು, ಆಗಸ್ಟ್ 4 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಜೂನ್–2018ರ ಮಾಹೆಯಲ್ಲಿ ನಡೆಸಿದ ಡಿ.ಇಎಲ್.ಇಡಿ/ ಡಿ.ಇಡಿ ಮುಖ್ಯ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ರಾಜ್ಯದ ಎಲ್ಲಾ ಡಯಟ್‌ಗಳಿಗೆ ಕಳುಹಿಸಲಾಗಿದೆ. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾ ಡಯಟ್‌ಗಳಿಂದ ಫಲಿತಾಂಶ ಪಟ್ಟಿಯನ್ನು ಪಡೆದು ದಿನಾಂಕ:08.08.2018ರಂದು ಬೆಳಿಗ್ಗೆ 10:00 ಗಂಟೆಗೆ ಫಲಿತಾಂಶವನ್ನು ಆಯಾ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 788/898**

## Result

**Bengaluru, July 4(Karnataka Information)**

As per the statement of Director (Other Exams), Karnataka Secondary Education Examination Board, Bangalore. The result of the D.El.Ed/D.Ed Main Examination conducted in June-2018 by Karnataka Secondary Education Examination Board, Bangalore is sent to the concerned DIET's and instructed to announce the result on 08.08.2018 at 10:00 AM in respective Colleges says official press release.